ಶ್ರೀ ಎಸ್. ಶಿವಪ್ಪ.—ಹೊನವುರ್ಗದಲ್ಲಿ ಅವರ ಚುನಾವಣೆಯ ಮರುಕ್ಷಣದಲ್ಲೇ ಟ್ರಾನ್ಸ್‌ಫರ್ ಆಗಿರುವುದರಿಂದ ಅದಕ್ಕೆ ಚುನಾವಣೆಯೇ ಕಾರಣವೇ ?

ಶ್ರೀ ಎಸ್. ಆರ್. ಕಂಠಿ.—ತಾವು ಬಾದರಾಯಣ ಪುರಾಣವನ್ನು ಕಲ್ಪಿಸಿದ್ದೀರಿ. ಎರಡು ವರ್ಷಗಳಾದ ಮೇಲೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುತ್ತದೆ. ಆದ್ದರಿದ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ.

Sri S. SIVAPPA.—May I know what were the strong reasons for the Government to transfer a nnmber of teachers immediately after the general elections ?

ಶ್ರೀ ಎಸ್. ಆರ್. ಕಂಠಿ.—ನಾನು ಆ ವಿಷಯವನ್ನು ಈಗಾಗಲೇ ಹೇಳಿದೆ. ಉಪಾಧ್ಯಾಯರ ಟ್ರಾನ್ಸ್‌ಫರನ್ನು ಸರ್ಕಾರದವರು ಮಾಡುವುದಿಲ್ಲ ಎಂದು. ಇನ್‌ಸ್ಪೆಕ್ಟರು D. E. O. ಅವರಿಗೆ ರಿಪೋರ್ಟ್‌ನ್ನು ಕಳುಹಿಸುತ್ತಾರೆ ಎರಡು ವರ್ಷಗಳಿಗೆ ಮೇಲ್ಪಟ್ಟು ಯಾರು ಯಾರು ಇದ್ದಾರೋ ಅವರೆಲ್ಲರನ್ನು D. E. O. ಅವರು ಟ್ರಾನ್ಸ್‌ಫರ್ ಮಾಡುತ್ತಾರೆ.

ಶ್ರೀ ಜಿ. ಟಿ. ರಂಗಪ್ಪ.—ಈಗ 13 ಜನಗಳನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ಅವರು ಯಾರು ಯಾರು ಎಷ್ಟುವರ್ಷಗಳಿಂದ ಆ ಸ್ಥಳಗಳಲ್ಲಿ ಇದ್ದಾರೆ ?

ಶ್ರೀ ಎಸ್. ಆರ್. ಕಂಠಿ.— ಶ್ರೀ ಜಿ. ಸಿದ್ದಪ್ಪ 4 ವರ್ಷಗಳಿಂದ ಇದ್ದಾರೆ. ಶ್ರೀ ತವನಪ್ಪ 8 ವರ್ಷಗಳಿಂದ ಇದ್ದಾರೆ. ಶ್ರೀ ಬಿ. ಪರಮೇಶ್ವರಪ್ಪ 13-6-1957 ರಿಂದ ಇದ್ದಾರೆ. ಶ್ರೀ ಎಚ್. ಎಸ್. ಧರ್ಮಪ್ಪ 24-5-1960 ರಿಂದ ಇದ್ದಾರೆ. ಶ್ರೀ ಎಸ್. ಸಿದ್ದಪ್ಪ 19-2-1958 ರಿಂದ ಇದ್ದಾರೆ. ಶ್ರೀ ಟಿ. ಪಿ. ಮಾಕಾರ್ಂಡೇಯಪ್ಪ 3-6-1956 ಇದ್ದಾರೆ. ಶ್ರೀ ಮಲ್ಲಾಚಾರಿ 5-8-1956 ರಿಂದ ಇದ್ದಾರೆ. ಶ್ರೀ ಜಿ. ಮಹದೇವ 6-6-1958 ರಿಂದ ಇದ್ದಾರೆ. ಶ್ರೀ ಜೆ. ನಾರಾಯಣರಾವ್ ಅಕ್ಕೂರ್ 1961ನೇ ಇಸವಿಯಿಂದ ಇದ್ದಾರೆ. ಶ್ರೀ ಬಿ. ತಿಮ್ಮರಾಯಪ್ಪ 7-9-1957 ರಿಂದ ಇದ್ದಾರೆ. ಶ್ರೀ ಎಚ್. ಹನುಮಂತಯ್ಯ 6-7-1960 ರಿಂದ ಇದ್ದಾರೆ. ಶ್ರೀ ಜಿ. ಎಸ್. ಕೃಷ್ಣಪ್ಪ 1956 ರಿಂದ ಇದ್ದಾರೆ. ಶ್ರೀ ಜಿ. ಎಸ್. ಚನ್ನಪ್ಪ 8 ವರ್ಷಗಳಿಂದ ಇದ್ದಾರೆ. ಶ್ರೀ ಜಿ. ರಂಗಪ್ಪ 1960ನೇ ಇಸಯಿಂದ ಇದ್ದಾರೆ. ಶ್ರೀ ಕರೀಗೌಡ 1957ನೇ ಇಸವಿಯಿಂದ ಇದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಪೈಕಿ 6 ತಿಂಗಳು, ಒಂದು ವರ್ಷದ ಹಿಂದೆ ಅಲ್ಲಿಗೆ ಟ್ರಾನ್ಸ್‌ಫರ್ ಆದವರು ಯಾರಾದರೂ ಇದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಅಂಥಾವರು ಯಾರೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—4 ವರ್ಷ 8 ವರ್ಷಗಳಿಂದ ಒಂದೇ ಕಡೆ ಕೆಲಸ ಮಾಡತಕ್ಕ ಉಪಾಧ್ಯಾಯರು ಚುನಾವಣೆಯ ಕಾಲದಲ್ಲಿ ಚುನಾವಣೆಯಲ್ಲಿ ಕೈ ಹಾಕಿದರು ಎಂದು ಸರ್ಕಾರಕ್ಕೇನಾದರೂ ದೂರು ಬಂದಿದೆಯೇ ?

ಶ್ರೀ ಎಸ್. ಆರ್ ಕಂಠಿ.—ಈ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಜಿ. ಟಿ. ರಂಗಪ್ಪ.—ಒಂದೇ ಸ್ಥಳದಲ್ಲಿ 15 ವರ್ಷಗಳಿಂದ ಕೆಲಸ ಮಾಡತಕ್ಕವರು ಯಾರೂ ಇಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅಂಥವರು ಯಾರಾದರೂ ಇದ್ದರೆ ಹೇಳಿ. ಅದನ್ನು ಯೋಚನೆ ಮಾಡೋಣ.

ಶ್ರೀ ಜಿ. ಟಿ. ರಂಗಪ್ಪ.—ಉಪಾಧ್ಯಾಯರನು ಟ್ರಾನ್ಸ್‌ಫರ್ ಮಾಡುವಾಗ ಸೀನಿಯಾರಿಟಿಯ ಮೇಲೆ ಅವರನ್ನು ಟ್ರಾನ್ಸ್‌ಫರ್ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಎರಡು ವರ್ಷಗಳಿಗಿಂತ ಜಾಸ್ತಿ ಒಂದೇ ಸ್ಥಳದಲ್ಲಿ ಯಾರಾದರೂ ಇದ್ದರೆ ಅಂಥವರನ್ನು ವರ್ಗ ಮಾಡುತ್ತೇವೆ.

Sri S. SIVAPPA.—According to the list the hon'ble minister read, there are teachers working in that particular Taluk ranging from one your to 6 or 7 years. May I know why you tolerated these teachers to stay there for 6 to 7 years and one fine morning after general election how did Government make up their mind that since they had served more than 2 years they should be transferred.

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ನಾನು ಈಗಾಗಲೇ ಉತ್ತರವನ್ನ ಹೇಳಿದ್ದೇನೆ. ಇಂಥಾ ವಿಷಯದಲ್ಲಿ ಏನಾಗುತ್ತದೆ ಎಂದರೆ ಕೆಳಗಿನ ಆಫೀಸರುಗಳು ಅದನ್ನು ನೋಡುತ್ತಾ ಇರುತ್ತಾರೆ. ಅವರ ಗಮನಕ್ಕೆ ಬಂದ ಬಂದ ಹಾಗೆ ಟ್ರಾನ್ಸ್‌ಫರ್ ಮಾಡುತ್ತಾರೆ.

Appointment of Secretaries to all the Panchayats iu South Kanara District.

*Q.–697 Sri DAYANANDA R. KALLE (Karkal).—

Will the Government be pleased to state :—

(*a*) whether Secretaries have been appointed to all the Panchayats constituted under the Mysore Village Panchayats Act 1959, in South Kanara District and if not, the number of Panchayats in South Kanara District that are without Secretaries ;

(*b*) wheher they are aware that the Panchayat Funds cannot be operated without the presence of the Secretary in these Panchayats ?

A.—Sri KONDAJJI BASAPPA (Deputy Minister for Co-operation) [On behalf of SRI RAMAKRISHNA HEGDE (Minister for Co-operation and Development)].—

(*a*) Yes ; but in the case of 12 Village Panchyats in South Kanara District the persons appointed as

Secretaries have either resigned or have not been attending to their work properly.

(*b*) Yes.

ಶ್ರೀ ದಯಾನಂದ ಆರ್. ಕಳ್ಳಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 12 ಗ್ರಾಮ ಪಂಚಾಯಿತಿಗಳಿಗೆ ನೇಮಕ ಮಾಡಲಾದ ಕಾರ್ಯದರ್ಶಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಹೇಳಿದ್ದೀರಿ. ಈ ರೀತಿ ಆಗುವುದಕ್ಕೆ ಅವರಿಗೆ ಕೊಟ್ಟಿರುವ ಕಡಮೆ ಸಂಬಳವೇ ಕಾರಣ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

† **Sri KONDAJJI BASAPPA**.—Appointments were made for all these panchayats and even for 12 panchayats also appointments were made. But unfortunately most of them were Shanbhogues who were appointed and they found it difficult to work. So vacancies have occurred and we have instructed the Tahsildars of Taluks and Chief Executive officers of the Development Taluk blocks to suggest some names and immediately names are sent by them; the Deputy Commissioner will send them with suitable recommendations and the Divisional Commissioner will appoint them.

ಶ್ರೀ ದಯಾನಂದ ಆರ್. ಕಳ್ಳಿ.—ಎರಡು ಮೂರು ಪಂಚಾಯಿತಿಗಳಿಗೆ ಒಬ್ಬ ಸೆಕ್ರಟರಿಯನ್ನು ನೇಮಕ ಮಾಡಿದ ಪಂಚಾಯಿತಿಗಳೆಷ್ಟು ?

ಶ್ರೀ ಕೊಂಡಜ್ಜಿ ಬಸಪ್ಪ.—ಒಂದು ಪಂಚಾಯಿತಿಗೆ ಒಬ್ಬ ಸೆಕ್ರೆಟರಿ ಇದ್ದಾರೆ. 12 ಪಂಚಾಯಿತಿಗಳಿಗೆ ಮಾತ್ರ ಸೆಕ್ರೆಟರಿಗಳ ಪೋಸ್ಟ್ ವೇಕೆಂಟ್ ಇವೆ.

ಶ್ರೀ ದಯಾನಂದ ಆರ್. ಕಳ್ಳಿ.—ಪಂಚಾಯಿತಿ ಸೆಕ್ರೆಟರಿಗಳಿಗೆ ಸಂಬಳ ಎಷ್ಟು? ಅವರು ಪೂರ್ಣ ಕಾಲ ಕಾರ್ಯ ಕರ್ತರೇನು ?

Sri KONDAJJI BASAPPA.—That information I have not got.

ಶ್ರೀ ಬಿ. ಭಾಸ್ಕರಶೆಟ್ಟಿ.—ಒಂದೊಂದು ಪಂಚಾಯಿತಿಗೆ ಒಬ್ಬೊಬ್ಬ ಸೆಕ್ರೆಟರಿ ಇದ್ದಾರೆ ಎಂದು ಹೇಳಿದಿರಿ, 3 ಪಂಚಾಯಿತಿಗಳಿಗೆ ಒಬ್ಬ ಸೆಕ್ರೆಟರಿ ಇದ್ದ ವಿಷಯವನ್ನ ತಂದರೆ ಏನು ಮಾಡುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ನನಗೆ ಬಂದಿರುವ ಇನ್‌ಫರ್ ಮೇಷನ್ ಪ್ರಕಾರ 12 ಪಂಚಾಯಿತಿಗಳಿಗೆ ಮಾತ್ರ ವೇಕನ್ಸಿಗಳಿವೆ. ಈಗ ಪುನಃ ಎರಡಕ್ಕೆ ಅಪಾಯಿಂಟ್ ಮಾಡಿದೆ ಎಂದು ರಿಪೋರ್ಟ್ ಬಂದಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಎಷ್ಟು ಪಂಚಾಯಿತಿಗಳಿಗೆ ಗ್ರಾಮ ಸೇವಕರು ಸೆಕ್ರೆಟರಿಗಳಾಗಿದ್ದಾರೆ. ?

Sri KONDAJJI BASAPPA.—I want notice. That information is not with me.

9-30 P. M.

ಶ್ರೀ ಎ. ಎಂ. ದೇವ್.—ಈ ಪಂಚಾಯಿತಿ ಸೆಕ್ರೆಟರಿಗಳಿಗೆ ಎಷ್ಟು ಸಂಬಳ ಕೊಡುತ್ತಾ ಇದ್ದೀರಿ ?

Sri KONDAJJI BASAPPA.—So far as pay is concerned, that information is not with me at present. If the hon'ble member wants to get that information I will get it.

ಶ್ರೀ ಬಿ. ಚನ್ನಬೈರೇಗೌಡ.—ಈ 12 ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳನ್ನು ನಿಯಮಿಸಿದ ಮೇಲೆ ಮೊದಲು ಕೆಲಸ ಮಾಡುತ್ತಾ ಇದ್ದ ಪಟೇಲ್ ಶ್ಯಾನುಭೋಗರನ್ನು ಕೆಲಸದಿಂದ ತೆಗೆದು ಹಾಕಿದ್ದಿರಾ ?

Sri KONDAJJI BASAPPA.—In response to the advertisment they had applied and they were appointed. They were also Shanbhogues. The Government have thought that they cannot carry on the work properly. So we are now thinking of appointing fresh persons.

ಶ್ರೀ ಎಸ್. ಸುಬ್ಬಯ್ಯನಾಯಕ್.—ಈ 12 ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳು ಇಲ್ಲ ಎಂದು ಹೇಳಿದೀರಿ. ಹಾಗಾದರೆ ಅಲ್ಲಿ ಪಂಚಾಯಿತಿ ಕೆಲಸ ಯಾರ ಮೂಲಕ ನಡೆಯುತ್ತಾ ಇದೆ ?

Sri KONDAJJI BASAPPA.—At present the Chairmen are there and they are carrying on the work.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬೇಶದಲ್ಲಿ ಗ್ರಾಮಾಧಿಕಾರಿಗಳ ಬಿಲ್ ಜಾರಿಗೆ ಬಂದು ಇದುವರೆಗೂ ಸೆಕ್ರೆಟರಿಗಳನ್ನು ನೇಮಕ ಮಾಡದೇ ಇರುವುದೇ ಇಂಥಾ ಪ್ರಶ್ನೆಗಳಿಗೆ ಅವಕಾಶ ಕೊಡುತ್ತಾ ಇರುವುದರಿಂದ ಜನಗಳಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—In some of the Panchayats in response to the advertisement we have not secured the services of persons. There is a proposal before the Government to reduce the educational qualifications and also age-limit. If that is done, there may be good response.

ಶ್ರೀ ಕೆ. ವಿ. ಬೈರೇಗೌಡ.—ಸೆಕ್ರೆಟರಿ ಇಲ್ಲದೇ ಹೋದರೆ ದಿನವಹಿ ಕೆಲಸ ಕಾರ್ಯ ನಡೆಯುವುದಕ್ಕೆ ತೊಂದರೆಯಾಗುತ್ತದೆಯಲ್ಲವೇ ?

Sri KONDAJJI BASAPPA.—Of course, there is trouble. The cheques are to be issued over the signature] of the Chairman and Secretary. There is some difficulty.

Mr. SPEAKER.—Question hour is over.